**ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಛಲವಾದಿ ಟಿ ನಾರಾಯಣಸ್ವಾಮಿ, ಶ್ರೀ ಕೇಶವ ಪ್ರಸಾದ್ ಎಸ್, ಶ್ರೀಮತಿ ಹೇಮಲತಾ ನಾಯಕ್ ಹಾಗೂ ಇತರರು ನಿಯಮ 330ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ:**

ಹೆಚ್ಚಿನ ಆದಾಯ ಸಂಗ್ರಹಿಸುವ ಗುರಿಯೊಂದಿಗೆ ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ನೋಂದಣಿ ಹಾಗೂ ಮುದ್ರಾಂಕ ಶುಲ್ಕ ಹೆಚ್ಚಿಸಿ ಆದೇಶ ಹೊರಡಿಸಿದೆ. ಆದರೆ, ಇದು ರೈತಾಪಿ ವರ್ಗಕ್ಕೆ ಭಾರಿ ಹೊರೆಯಾಗಿ ಪರಿಣಮಿಸಿದೆ.

ಬರದಿಂದ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿ ರೈತರು ಕಂಗಾಲಾಗಿರುವ ನಡುವೆಯೇ ರಾಜ್ಯ ಸರ್ಕಾರ ಮುದ್ರಾಂಕ ಶುಲ್ಕ ಹೆಚ್ಚಿಸಿರುವುದು ರೈತ ವರ್ಗಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ವಿವಿಧ ಸರ್ಕಾರಿ ಯೋಜನೆಗಳಿಗೆ ಮತ್ತು ಕೃಷಿ ಚಟುವಟಿಕೆಗೆ ಅಗತ್ಯವಿರುವ ಮುಚ್ಚಳಿಕೆ ಪತ್ರ, ಪ್ರಮಾಣ ಪತ್ರ, ವಿವಿಧ ರೀತಿಯ ಬಾಂಡ್ಗಳನ್ನು ಖರೀದಿಸಲು ದುಪ್ಪಟ್ಟು ಹಣ ಪಾವತಿಸುವ ಅನಿವಾರ್ಯ ರೈತರಿಗೆ ಎದುರಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಸರ್ಕಾರ ಹಲವು ಸ್ಟ್ಯಾಂಪ್ ದರಗಳ ಏರಿಕೆ ಮಾಡಿದ್ದರ ಪರಿಣಾಮ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಮೊದಲೇ ಬರದ ಹಿನ್ನೆಲೆಯಲ್ಲಿ ರೈತರ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಈ ನಡುವೆ ಸ್ಟ್ಯಾಂಪ್ ದರಗಳನ್ನು ಸರ್ಕಾರ ಮೂರರಿಂದ ನಾಲ್ಕು ಪಟ್ಟು ಹೆಚ್ಚಿಸಿರುವುದು ರೈತರನ್ನು ಚಿಂತೆಗೀಡು ಮಾಡಿದೆ.

ರಾಜ್ಯ ಸರ್ಕಾರ ಮುದ್ರಾಂಕ ಶುಲ್ಕ ಏರಿಕೆ ಮರುಪರಿಶೀಲಿಸಬೇಕು ಮತ್ತು ರೈತರಿಗೆ ಪ್ರತ್ಯೇಕ, ಕಡಿಮೆ ಮೊತ್ತದ ದರ ನಿಗದಿ ಮಾಡುವುದು ಅಗತ್ಯವಿದೆ ಎಂದು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಹೇಳಿಕೆ:**

ಕರ್ನಾಟಕ ಮುದ್ರಾಂಕ ಕಾಯ್ದೆ 1957 ರಲ್ಲಿನ ಷೆಡ್ಯೂಲ್‌ನಲ್ಲಿರುವ ಕೆಲವೊಂದು ಅನುಚ್ಛೇದಗಳಿಗೆ ಅಧಿಸೂಚನೆ ಸಂಖ್ಯೆ: DPAL 39 SHASANA 2023, ದಿನಾಂಕ: 03-02-2024 ರನ್ವಯ ತಿದ್ದುಪಡಿಗಳನ್ನು ಜಾರಿಗೆ ತಂದು ಮುದ್ರಾಂಕ ಶುಲ್ಕಗಳನ್ನು ಪರಿಷ್ಕರಿಸಲಾಗಿರುತ್ತದೆ.

ಸದರಿ ತಿದ್ದುಪಡಿಗಳಲ್ಲಿ ಪ್ರಮುಖವಾಗಿ ಕೆಲವು ನೋಂದಣಿ ಕಡ್ಡಾಯವಲ್ಲದ ದಸ್ತಾವೇಜುಗಳಿಗೆ ಅನ್ವಯಿಸುವ ಮುದ್ರಾಂಕ ಶುಲ್ಕಗಳಾಗಿರುತ್ತವೆ. ಉದಾಹರಣೆಗೆ ಅಫಿಡೆವಿಟ್, ಸ್ವಾಧೀನ ರಹಿತ ಕ್ರಯದ ಕರಾರು, Work Contract Chit ಗಳಿಗೆ ಸಂಬಂಧಿಸಿದ ಕರಾರುಗಳು, ದಾಖಲೆಗಳ ಬತ್ತಿ ಪತ್ರಗಳು (DTD), Copy of Extract. Duplicate Letter of Allotment, Hypothecation, Article of Association, Bond, Bank Guarantee, Certificate of Enrolment, Composition Deed, Memorandum of Association, Partition Deed, Partnership Deed, Power of Attorney, Security Bond ) Trust.

ಸದರಿ, ಅನುಚ್ಛೇದಗಳ ಪೈಕಿ ರೈತರ ವ್ಯವಹಾರಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಬಹಳ ವಿರಳವಾಗಿರುವುದರಿಂದ ರೈತರಿಗೆ ಇದರಿಂದ ಆರ್ಥಿಕ ಸಂಕಷ್ಟಕ್ಕೆ ಗುರಿ ಮಾಡಿರುವುದಿಲ್ಲ ರೈತರಿಗೆ ಅನ್ವಯಿಸುವ ಅಫಿಡವಿಟ್ ಪತ್ರಗಳಿಗೆ ಬೇರೆ ರಾಜ್ಯಗಳಾದ ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚು ಮುದ್ರಾಂಕ ಶುಲ್ಕವನ್ನು ನಿಗಧಿಪಡಿಸಿರುತ್ತಾರೆ ಹಾಗೂ ಕರ್ನಾಟಕ ರಾಜ್ಯದಲ್ಲಿ ಅಫಿಡೆವಿಟ್ ಪತ್ರಗಳಿಗೆ ರೂ.20/-ಗಳ ಮುದ್ರಾಂಕ ಶುಲ್ಕವನ್ನು ಮಾತ್ರ ನಿಗಧಿಪಡಿಸಲಾಗಿರುತ್ತದೆ. ಅಲ್ಲದೆ ಸದರಿ ತಿದ್ದಪಡಿಯಲ್ಲಿರುವ ಅನುಚ್ಛೇದಗಳ ಮುದ್ರಾಂಕ ಶುಲ್ಕಗಳನ್ನು ಸುಮಾರು 15-20 ವರ್ಷಗಳಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ ಮುದ್ರಾಂಕ ಶುಲ್ಕಗಳನ್ನು ಪರಿಷ್ಕರಿಸಲಾಗಿದ್ದು, ಇದು ಕೇಂದ್ರ ಸರ್ಕಾರದ One-Nation One-Stamp ಜಾರಿಗೊಳಿಸಲು ಚಿಂತನೆಯಾಗಿರುವುದನ್ನು ಗಣನೆಗೆ ತೆಗೆದುಕೊಂಡು

ಬೇರೆ ರಾಜ್ಯಗಳಲ್ಲಿ ಜಾರಿ ಇರುವ ಮುದ್ರಾಂಕ ಶುಲ್ಕಗಳ ಮಾಹಿತಿಯನ್ನು ಪಡೆದು ಪರಿಷ್ಕರಿಸಲಾಗಿದೆ.

ರಾಜ್ಯದಲ್ಲಿ ರೈತರು ಪಡೆಯುವ ಕೃಷಿ ಸಾಲಕ್ಕೆ ಸಂಬಂಧಿಸಿದ ಅಡಮಾನ ಪತ್ರಗಳಿಗೆ/ದಸ್ತಾವೇಜುಗಳಿಗೆ ಸಂಪೂರ್ಣ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ವಿನಾಯಿತಿಯನ್ನು ದಿ: 03.05.2005ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿದೆ.

ರೈತರು 5 ಲಕ್ಷ ಮಿತಿಯೊಳಗಿನ ವ್ಯವಸಾಯೇತರ ಸಾಲಗಳನ್ನು ಅಂಗೀಕೃತ ಹಣಕಾಸು ಸಂಸ್ಥೆಗಳಿಂದ ಪಡೆಯುವ ದಸ್ತಾವೇಜುಗಳಿಗೆ ಸಂಪೂರ್ಣ ಮುದ್ರಾಂಕ ಶುಲ್ಕ, ಮತ್ತು ನೋಂದಣಿ ಶುಲ್ಕಗಳಿಗೆ ವಿನಾಯಿತಿಯನ್ನು ದಿ: 29.03.2021ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿದೆ.

ರೈತರ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಾಗ, ಭೂ ಪರಿಹಾರದ ಹಣದ ಬದಲಾಗಿ, ಅಭಿವೃದ್ಧಿ ಮಾಡಿದ ಜಮೀನನ್ನು ಪರಿಹಾರವಾಗಿ ನೀಡುವ ಸಂದರ್ಭದಲ್ಲಿ ಹಾಗೂ ರೈತರಿಂದ ಜಮೀನನ್ನು ಸ್ವಾಧೀನಪಡಿಸಿಕೊಂಡಾಗ ನೀಡಿದ ಪರಿಹಾರ ಮೊತ್ತಕ್ಕೆ ಮೀರದ ಮೊಬಲಗಿನಲ್ಲಿ ರೈತರು ಜಮೀನನ್ನು ಖರೀದಿಸಿದ ಸಂದರ್ಭದಲ್ಲಿ ಬರೆದುಕೊಡುವ ದಸ್ತಾವೇಜುಗಳಿಗೆ ವಿಧಿಸಲಾಗುವ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕಗಳಲ್ಲಿ ಸಂಪೂರ್ಣ ವಿನಾಯಿತಿ ದಿ: 29.03.2021ರ ಸರ್ಕಾರದ ಅಧಿಸೂಚನೆಯಲ್ಲಿ ನೀಡಲಾಗಿದೆ.

ಕಂಇ/38/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು